ಶ್ರೀ ಎಸ್. ಪುಟ್ಟಸ್ವಾಮಿ.—ಕೇಂದ್ರ ಸರ್ಕಾರದ ನೆರವು ದೊರಕದಿದ್ದರೂ ರಾಜ್ಯ ಸರ್ಕಾರದ ಪತಿಯಿಂದಲೇ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.—ಪರ್ಯಾಯ ಕೆಲಸವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ನಿರ್ಣಯ ಮಾಡಿದೆ. ಹಣದ ಕೊರತೆ ಇರುವುದು ತಮಗೂ ಗೊತ್ತಿದೆ, ಸೆಂಟ್ರಲ್ ಗೌರ್ವಮೆಂಟ್ ಅಸಿಸ್ಟೆನ್ಸ್ ಸಿಗದೇ ಹೋದರೂ ಆಳ-ಅಗಲದಲ್ಲಿ ಅವಶ್ಯಕವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶೃಂಗೇರಿಯಲ್ಲಿ ಲೋಕೋಪಯೋಗಿ ಇಲಾಖೆಯವರು ಕಟ್ಟಿರುವ ಎರಡು ಕಟ್ಟಡಗಳನ್ನು ಉಪಯೋಗಿಸದಿರುವ ಬಗ್ಗೆ

೪೮೦ (೧೩೫೧) ಶ್ರೀ ಹೆಚ್. ಜಿ. ಗೋವಿಂದಗೌಡ(ಶೃಂಗೇರಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ :—

ಅ) ಕುದುರೆಮುಖ ಕೆಲಸ ನಡೆಯುತ್ತಿದ್ದಾಗ ಲೋಕೋಪಯೋಗಿ ಇಲಾಖೆಯವರು ಶೃಂಗೇರಿಯ ಕೆರೆ ಕಟ್ಟೆಯಲ್ಲಿ ಉಪ ವಿಭಾಗದ ಕಚೆ ರಿಪತ್ತ ಉಗ್ರಾಣಕ್ಕಾಗಿ ಎರಡು ದೊಡ್ಡ ಕಟ್ಟಡಗಳನ್ನು ಸುಮಾರು ನಾಲ್ಕೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದ್ದು ಆ ಕಟ್ಟಡಗಳನ್ನು ಯಾರು ನೋಡಿಕೊಳ್ಳದೆ, ದುಸ್ಥಿತಿ ಹಾಗೂ ಬಿದ್ದು ಹೋಗುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕಟ್ಟಡಗಳನ್ನು ಗ್ರಾಮಪಂಚಾಯ್ತಿಯವರಿಗಾದರೂ ವಹಿಸಿಕೊಡಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ. ೨,೯೦,೦೦೦ ರೂಪಾಯಿಗಳ ವೆಚ್ಚದಲ್ಲಿ ಈ ಎರಡು ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಈ ಕಟ್ಟಡಗಳು ಈಗ ದುಸ್ಥಿತಿಯಲ್ಲಿವೆ.

(ಆ) ಈ ಊರಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಯಾವ ಕಾರ್ಯಾಲಯವನ್ನೂ ಪ್ರಾರಂಭಿಸುವ ಸಂಭವವಿಲ್ಲದ್ದರಿಂದ, ಗ್ರಾಮ ಪಂಚಾಯ್ತಿಯವರಿಂದ ಬೇಡಿಕೆ ಬಂದಲ್ಲಿ ಈ ಕಟ್ಟಡಗಳನ್ನು ಅವರಿಗೆ ವರ್ಗಾಯಿಸುವ ವಿಷಯ ಪರಿಶೀಲಿಸಲಾಗುವುದು.

ಶ್ರೀ ಹೆಚ್. ಜಿ. ಗೋವಿಂದ ಗೌಡ.—ಮಾನ್ಯ ಅಧ್ಯಕ್ಷರೇ, ೨ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರತಕ್ಕ ಪಿ. ಡಬ್ಲ್ಯೂ.ಡಿ. ಸಬ್ ಡಿವಿಜನ್ ಆಫೀಸ್ ಕಟ್ಟಡ ಯಾರ ಒಂದು ಮೇಲ್ವಿಚಾರಣೆ ಇಲ್ಲದೆ ಹಾಳಾಗುತ್ತಿದೆ, ಆದುದರಿಂದ ಆ ಕಟ್ಟಡವನ್ನು ಆಯುರ್ವೇದಿಕ್ ಆಸ್ಪತ್ರೆ ನಡೆಸುವವರಿಗೋ ಅಥವಾ ಜಾನುವಾರು ಆಸ್ಪತ್ರೆಗಾದರೂ ನಡೆಸುವವರಿಗಾದರೂ 'ವಹಿಸಿ ಕೊಟ್ಟರೆ' ಆ ಕಟ್ಟಡವನ್ನು ಮೇಂಟೆನ್ ಮಾಡುವ ದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೆ ಗೌಡ.—ಮಾನ್ಯ ಸದಸ್ಯರು ಹೇಳಿದಂಥ ಉಪಯುಕ್ತವಾದ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ ಆಯುರ್ವೇದಿಕ್ ಆಸ್ಪತ್ರೆಯವರು ಅಥವಾ ಅನಿಮಲ್ ಹಸ್ಬೆಂಡ್ರಿ ಇಲಾಖೆಯವರು ಅಲ್ಲಿ ಈ ಕಟ್ಟಡವನ್ನು ಆಸ್ಪತ್ರೆಗೆ ಉಪಯೋಗ ಮಾಡಿಕೊಳ್ಳಲು ಬೇಕೆಂದು ಕೇಳಿದರೆ ಅವರಿಗೆ ಆ ಕಟ್ಟಡವನ್ನು ವಹಿಸಿ ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ಗುಳೇದಗುಡ್ಡ ಮತಕ್ಷೇತ್ರದ ಹಂನಗುಂದ ತಾಲ್ಲೂಕು ಬೆಕನಾಳ ಗ್ರಾಮದ ಕೆರೆಯ ದುರಸ್ತಿ ಕುರಿತು

೪೮೧ (೧೦೩೩) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗುಳೇದಗುಡ್ಡ ಕ್ಷೇತ್ರದ ಹುನಗುಂದ ತಾಲ್ಲೂಕು ಬೆಕನಾಳ ಗ್ರಾಮದಲ್ಲಿ ಒಂದು ಪುರಾತನ ಕೆರೆಯಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅನೇಕ ವರ್ಷಗಳಿಂದ ಸದರಿ ಕೆರೆಯನ್ನು ದುರಸ್ತಿ ಮಾಡಿದ ಬಗ್ಗೆ ಖರ್ಚು ಹಾಕಿ ಅದನ್ನು ದುರಸ್ತಿ ಮಾಡಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಪ್ರತಿ ಕಳೆದ ಮೂರು ವರ್ಷಗಳಲ್ಲಿ ಮಾಡಿದ ಖರ್ಚು ಎಷ್ಟು (೩ ವರ್ಷಗಳ ಮಾಹಿತಿ ಒದಗಿಸಬೇಕಾಗಿ ಕೋರಿಕೆ)

ಈ) ಸದರಿ ಗ್ರಾಮಕ್ಕೆ ಕುಡಿಯುವ ನೀರಿಗಾಗಿ ಇದು ಒಂದೇ ಕೆರೆ ಇರುವುದು ಎಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(ಅ) ಬೆಕನಾಳ ಎಂಬ ಹೆಸರಿನ ಗ್ರಾಮವಿರುವುದಿಲ್ಲ ಆದರೆ ಚಿಕ್ಕನಾಳ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಒಂದು ಪುರಾತನವಾದ ಸಣ್ಣ ಕೆರೆ ಇದೆ.

(ಆ) ಇದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಈ ಕಟ್ಟೆಯ ದುರಸ್ತಿಗಾಗಿ ಯಾವ ಹಣವನ್ನು ಖರ್ಚು ಮಾಡಿರುವುದಿಲ್ಲ.

(ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಇಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಮಾನ್ಯ ಅಧ್ಯಕ್ಷರೇ ಇದು ಬಹಳ ಪುರಾತನವಾದ ಕೆರೆಯಾಗಿದೆ. ಇದರಿಂದ ಸುಮಾರು ೨೦೦-೩೦೦ ಎಕರೆ ನೀರಾವರಿಯಾಗುತ್ತದೆ.

ಉಪಾಧ್ಯಕ್ಷರು.—ಇದು ಅವರ ಇಲಾಖೆಗೆ ಸೇರುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಗಮನಿಸಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸುತ್ತಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಪರಿಶೀಲನೆ ಮಾಡಿ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ ತಾವು ಕುಳಿತುಕೊಳ್ಳಿ.

ಪ್ರಸಕ್ತ ಬೇಸಿಗೆಯಲ್ಲಿ ಘಟಪ್ರಭಾ ಎಡದಂಡೆ ನಾಲೆಯ ಕೆಳಗೆ ಬೇಸಿಗೆ ಬೆಳೆಗೆ ನೀರೊದಗಿಸುವುದು

೪೮೨ (೧೦೪೨) ಶ್ರೀ ಎಂ. ಎಲ್. ಮುತ್ತಣ್ಣನವರ್(ಗೋಕಾಕ್).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಈಗ ಹಿಡಕಲ್ ಜಲಾಶಯದಲ್ಲಿ ತನ್ನ ಸಾಮರ್ಥ್ಯದಷ್ಟು ನೀರು ಸಂಗ್ರಹಿತವಾಗಿದ್ದು ಘಟಪ್ರಭಾ ಎಡದಂಡೆ ಕಾಲುವೆಯ ನೀರಾವರಿ ಯೋಜನೆಯಲ್ಲಿ ಶೇಕಡ ೨೦ ಬೇಸಿಗೆ ಬೆಳೆಗೆ ನೀರು ಕೊಡುವ ಯೋಜನಾ ವರದಿಯಿದ್ದು ಈ ವರ್ಷ ಯೋಜನಾ ಕ್ಷೇತ್ರದಲ್ಲಿ ಬೇಸಿಗೆ ಬೆಳೆಗೆ ನೀರನ್ನೊದಗಿಸಲಾಗುವುದೇ ?

ಆ) ನೀರನ್ನೊದಗಿಸದಿದ್ದಲ್ಲಿ ಕಾರಣಗಳೇನು ?

ಇ) ಈ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಇಲ್ಲ.

(ಆ) ಸಂಗ್ರಹವಾಗಿರುವ ನೀರು ಈಗಾಗಲೇ ನಿಗಧಿಪಡಿಸಿದಂತೆ ಹಿಂಗಾರಿ ಬೆಳೆಗಳಿಗೆ ನೀರಾವರಿಯನ್ನು ೧೯೮೪ರ ೧೫ನೆಯ ಮಾರ್ಚ್‌ವರೆಗೆ ವಿಸ್ತರಿಸಿದ್ದುದರಿಂದ, ಅಭಾವ ಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಒಪ್ಪಲಾಗಿರುವ ಇತರ ಅಗತ್ಯಗಳಿಗೆ ಸಾಕಾಗುವಷ್ಟು ಮಾತ್ರ ಇದೆ.